**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ-577 222 ಫೋ: 08182 246165** www.shimul.coop

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಸಂಖ್ಯೆ/ಶಿಸಹಾಒ/ಶೇಮತಾಂ/ಲಸಿಕಾ. ಕಾ/201/01/2546/2015-16 **ದಿನಾಂಕ: 15.07.2015**

## ದಿನದ ಬಾಡಿಗೆ ಆಧಾರದಲ್ಲಿ ವಾಹನ ಒದಗಿಸಲು

ಶಿವಮೊಗ್ಗ ಹಾಲು ಒಕ್ಕೂಟದ ವ್ಯಾಪ್ತಿಯ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ ರೈತರ ಜಾನುವಾರುಗಳಿಗೆ ಕಾಲು ಬಾಯಿ ರೋಗ ನಿಯಂತ್ರಣಾ ಲಸಿಕೆ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಪಶುಸಂಗೋಪನಾ ಇಲಾಖೆಯಿಂದ **ದಿನಾಂಕ 01.08.2015 ರಿಂದ 15.08.2015 ರವರೆಗೆ** 15 ದಿನಗಳ ಕಾಲ ನಡೆಯಲಿದ್ದು, ಈ ಅವದಿಗೆ ಶಿವಮೊಗ್ಗ ಹಾಲು ಒಕ್ಕೂಟದ ವತಿಯಿಂದ ವಾಹನ ಪಡೆದು ಪಶುಸಂಗೋಪನಾ ಇಲಾಖೆಗೆ ವಾಹನ ಒದಗಿಸಲು ಕರ್ನಾಟಕ ಸರ್ಕಾರದ ಪಾರದರ್ಶಕ ನಿಯಮದಡಿ ವಾಹನಗಳ ಟೆಂಡರ್ ಕರೆದಿದ್ದು, **ಹಳದಿ ಬೋರ್ಡ್** ಹೊಂದಿರುವ 6 ರಿಂದ 8 ಜನ ಪ್ರಯಾಣಿಸಲು ಅನುಕೂಲಕರವಾದ **ಟೆಂಪೊಟ್ರಾಕ್ಸ್/ಕ್ರೂಷರ್/ಟಾಟಾಸುಮೋ/ಮಾರುತಿವ್ಯಾನ್** ದಿನ ಬಾಡಿಗೆ ಆಧಾರದಲ್ಲಿ ಒದಗಿಸಬೇಕಾಗಿರುತ್ತದೆ. ಹಳದಿ ಬೋರ್ಡ್ ವಾಹನ ಹೊಂದಿರುವ, ಆಸಕ್ತ ವಾಹನ ಮಾಲೀಕರು ಶಿವಮೊಗ್ಗ ಹಾಲು ಒಕ್ಕೂಟದಿಂದ ಟೆಂಡರ್ ಫಾರಂ ಪಡೆದು ಭರ್ತಿ ಮಾಡಿ ಸಲ್ಲಿಸಬಹುದು. **ಪ್ರತಿ ಒಂದು ವಾಹನಕ್ಕೆ ಪ್ರತ್ಯೇಕ ಅರ್ಜಿ ಸಲ್ಲಿಸುವುದು. ವಾಹನಗಳ ವಿವರ ಈ ಕೆಳಕಂಡಂತೆ ಇರುತ್ತದೆ.** ವಾಹನ ಮಾಲೀಕರು ಪಾನ್‌ಕಾರ್ಡ್ ಮತ್ತು ಬ್ಯಾಂಕ್ ಖಾತೆ ಹೊಂದಿರಬೇಕಾಗಿರುತ್ತದೆ.

**ಟೆಂಡರ್ ಫಾರಂ ದರ ರೂ. 115/- (ತೆರಿಗೆ ಸೇರಿ)**

**ಟೆಂಡರ್ ಫಾರಂ ಮಾರಾಟ ದಿನಾಂಕ : 20.07.2015 ರಿಂದ 27.07.2015 ಸಂಜೆ 5.00 ರವರೆಗೆ**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28.07.2015 ಬೆಳಿಗ್ಗೆ 10.55 ಗಂಟೆಯವರೆಗೆ.**

**ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ತೆರೆಯುವ/ದರ ಸಂಧಾನ ಮಾಡುವ ದಿನಾಂಕ:28.07.2015 ಬೆಳಗ್ಗೆ- 11.00 ಗಂಟೆಗೆ**

**ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಚಲಿಸಬೇಕಾಗಿರುವ ಮತ್ತು ಅವಶ್ಯವಿರುವ ವಾಹನಗಳ ವಿವರ ಈ ಕೆಳಕಂಡಂತಿದೆ.**

| ಕ್ರ. ಸಂ | ಶಿವಮೊಗ್ಗ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ | ದಾವಣಗೆರೆ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ | ಚಿತ್ರದುರ್ಗ ಜಿಲ್ಲೆ | ಮಾರುತಿ ಒಮಿನಿ/ ಟಾಟಾ ಸುಮೋ/ಕ್ರೂಷರ್ |
|---|---|---|---|---|---|---|
| 1 | ಶಿವಮೊಗ್ಗ ತಾ\|\| | 6 | ದಾವಣಗೆರೆ ತಾ\|\| | 6 | ಚಿತ್ರದುರ್ಗ ತಾ\|\| | 4 |
| 2 | ಭದ್ರಾವತಿ ತಾ\|\| | 5 | ಹರಿಹರ ತಾ\|\| | 6 | ಹೊಸದುರ್ಗ ತಾ\|\| | 4 |
| 3 | ಸಾಗರ ತಾ\|\| | 3 | ಚನ್ನಗಿರಿ ತಾ\|\| | 6 | ಹೊಳಲ್ಕೆರೆ ತಾ\|\| | 4 |
| 4 | ಸೊರಬ ತಾ\|\| | 7 | ಹೊನ್ನಾಳಿ ತಾ\|\| | 8 | ಮೊಳಕಾಲ್ಮೂರು ತಾ\|\| | 2 |
| 5 | ಶಿಕಾರಿಪುರ ತಾ\|\| | 6 | ಜಗಳೂರು ತಾ\|\| | 3 | ಹಿರಿಯೂರು ತಾ\|\| | 4 |
| 6 | ತೀರ್ಥಹಳ್ಳಿ ತಾ\|\| | 2 | ಹರಪನಹಳ್ಳಿ ತಾ\|\| | 9 | ಚಳ್ಳಕೆರೆ ತಾ\|\| | 4 |
| **ಒಟ್ಟು** | | **29** | **ಒಟ್ಟು** | **38** | **ಒಟ್ಟು** | **22** |

**ಟೆಂಡರ್ ಫಾರಂಗಳು ಶಿವಮೊಗ್ಗ ಹಾಲು ಒಕ್ಕೂಟ, ಮಾಚೇನಹಳ್ಳಿ ಶಿವಮೊಗ್ಗ, ಹಾಗೂ ದಾವಣಗೆರೆ ಡೈರಿ ದೊಡ್ಡಬಾತಿ ದಾವಣಗೆರೆ, ಮತ್ತು ಚಿತ್ರದುರ್ಗ ಶೀತಲೀಕರಣ ಕೇಂದ್ರ, ಚಿತ್ರದುರ್ಗದಲ್ಲಿ ದೊರೆಯುತ್ತದೆ. ಹೆಚ್ಚಿನ ಮಾಹಿತಿಗಾಗಿ ಶಿವಮೊಗ್ಗ ಹಾಲು ಒಕ್ಕೂಟದ (ಶೇಮತಾಂ) ವಿಭಾಗವನ್ನು ಸಂಪರ್ಕಿಸಬಹುದಾಗಿದೆ**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**

**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**

**ಜಿಲ್ಲಾ ಸಹಕಾರ ಹಾಲು ಒಕ್ಕೂಟ**

## ಷರತ್ತು ಮತ್ತು ನಿಬಂಧನೆಗಳು :

1. 6 ರಿಂದ 8 ಜನ ಲಸಿಕೆದಾರರು ಪ್ರಯಾಣಿಸಲು ಟೆಂಪೊಟ್ರಾಕ್ಸ್/ಕ್ರೂಷರ್/**ಟಾಟಾಸುಮೋ/ಮಾರುತಿವ್ಯಾನ್** ಹಳದಿ ಬೋರ್ಡ್ ಹೊಂದಿದ್ದು, ಅಧಿಕಾರಿಗಳ ಸಂಚಾರಕ್ಕೆ ಸೂಕ್ತವಾಗಿರಬೇಕು. ಸ್ಥಳಿಯ ಗುತ್ತಿಗೆದಾರರಿಗೆ ಆದ್ಯತೆ. ಟೆಂಡರ್ ಅರ್ಜಿ ಲಕೋಟೆ ಮೇಲೆ ವಾಹನ ಒದಗಿಸಲಿರುವ ಜಿಲ್ಲೆ ಮತ್ತು ತಾಲ್ಲೂಕನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು. ಹಾಗೂ ಗುತ್ತಿಗೆದಾರರ ವಿಳಾಸ ಮತ್ತು ಮೊಬೈಲ್ ನಂ ನಮೂದಿಸುವುದು.
2. ಜಾನುವಾರುಗಳಿಗೆ ಬರುವ ಕಾಲು ಬಾಯಿ ರೋಗ ನಿಯಂತ್ರಣದ ಲಸಿಕೆಯನ್ನು ಹಾಕಲು ಶಿವಮೊಗ್ಗ ಹಾಲು ಒಕ್ಕೂಟವು ವಾಹನವನ್ನು ಪಡೆದು ಸರ್ಕಾರದ ಪಶುಸಂಗೋಪನಾ ಇಲಾಖೆಗೆ ನೀಡುತ್ತಿದ್ದು, ವಾಹನ ಒದಗಿಸಿದ ಗುತ್ತಿಗೆದಾರರ ಬಿಲ್ಲಿಗೆ ಪಶುಸಂಗೋಪನಾ ಇಲಾಖೆಯ ಅಧಿಕಾರಿಗಳು ದೃಢೀಕರಿಸಿದ ನಂತರ ಬಿಲ್ಲಿನ ಮೊತ್ತವನ್ನು ಚೆಕ್ ಮೂಲಕ ಮಾತ್ರ ಒಕ್ಕೂಟದ ವತಿಯಿಂದ ಪಾವತಿಸಲಾಗುವುದು.
3. ಹಳದಿ ಬೋರ್ಡ್ **ವಾಹನ ಪಾನ್‌ಕಾರ್ಡ್/ಬ್ಯಾಂಕ್ ಅಕೌಂಟ್** ಹೊಂದಿರುವ ವಾಹನ ಮಾಲೀಕರು ಮಾತ್ರ ಎಲ್ಲಾ ದಾಖಲಾತಿಗಳ ಜೆರಾಕ್ಸ್ ಪ್ರತಿಯನ್ನು ಕಡ್ಡಾಯವಾಗಿ ಲಗತ್ತಿಸಿ(**ವಾಹನ/ಪಾನ್‌ಕಾರ್ಡ್/ಬ್ಯಾಂಕ್‌ಅಕೌಂಟ್**)ಟೆಂಡರ್ ಅರ್ಜಿ ಸಲ್ಲಿಸಬಹುದು. ವಾಹನ ದಾಖಲಾತಿಗಳು **ರೂ. 2000/- ಇ.ಎಂ.ಡಿ. ಮೊತ್ತದ ಡಿ.ಡಿ./ನಗದು ರಶೀದಿ** ಇಲ್ಲದಿದ್ದಲ್ಲಿ ಟೆಂಡರ್ ಅರ್ಜಿಯನ್ನು ತಿರಸ್ಕರಿಸಲಾಗುವುದು.
4. ವಾಹನವನ್ನು ಅಧಿಕಾರಿಗಳು ಸೂಚಿಸಿದ ಸಮಯಕ್ಕೆ/ಸ್ಥಳಕ್ಕೆ ನಿಗದಿತ ಸಮಯದಲ್ಲಿ ಒದಗಿಸತಕ್ಕದ್ದು.
5. ಸರ್ಕಾರದ ನಿಯಮಾನುಸಾರ ಅನ್ವಯಿಸುವ ಆದಾಯ ತೆರಿಗೆ/ವೃತ್ತಿ ತೆರಿಗೆ/ಸೇವಾ ತೆರಿಗೆಯನ್ನು ಬಿಲ್ಲಿನಲ್ಲಿ ಕಟಾಯಿಸಲಾಗುವುದು.
6. ವಾಹನ ಮಾಲೀಕರು ಎಲ್ಲಾ ತೆರಿಗೆಗಳನ್ನು ಸೇರಿಸಿ ದಿನ ಬಾಡಿಗೆ ನಮೂದಿಸತಕ್ಕದ್ದು. ಈ ತಾತ್ಕಾಲಿಕ ವಾಹನವು ಆಯಾ ತಾಲ್ಲೂಕು ವ್ಯಾಪ್ತಿಯಲ್ಲಿ ಚಲಿಸಬೇಕಾಗಿರುತ್ತದೆ. ಡ್ರೈವರ್ ಬಾಟಾ, ವೈಟಿಂಗ್ ಚಾರ್ಜ್, ಹಾಲ್ಟಿಂಗ್ ಚಾರ್ಜ್‌ಗಳನ್ನು ಪ್ರತ್ಯೇಕ ವಾಗಿ ನೀಡಲಾಗುವುದಿಲ್ಲ. ಇವುಗಳನೆಲ್ಲಾ ಗಣನೆಗೆ ತೆಗೆದುಕೊಂಡು ದಿನ ಬಾಡಿಗೆ ನಮೂದಿಸುವುದು. ವಾಹನ ಒದಗಿಸಿದ ದಿನಕ್ಕೆ ಮಾತ್ರ ಒಕ್ಕೂಟದಿಂದ ಬಾಡಿಗೆ ನೀಡಲಾಗುವುದು.
7. ವಾಹನ ಚಾಲಕರು ಚಾಲನಾ ಪರವನಾಗಿ ಮತ್ತು ಚಾಲನಾ ಬ್ಯಾಡ್ಜ್ ಹೊಂದಿದ್ದು, ಒಕ್ಕೂಟದ/ ಪಶುಸಂಗೋಪನಾ ಇಲಾಖಾ ಅಧಿಕಾರಿಗಳು ಕೇಳಿದಾಗ ತೋರಿಸತಕ್ಕದ್ದು,
8. ವಾಹನವನ್ನು ಕಾಲು ಬಾಯಿ ರೋಗ ನಿಯಂತ್ರಣ ಲಸಿಕಾ ಕಾರ್ಯಕ್ರಮ ಅನುಷ್ಠಾನಗೊಳಿಸಲು ಪಡೆದಿದ್ದು, ವಾಹನ ದುರಸ್ಥಿ/ಅಪಘಾತವಾದಲ್ಲಿ ಗುತ್ತಿಗೆದಾರರೇ ಪ್ರತ್ಯೇಕ ವಾಹನದ ವ್ಯವಸ್ಥೆ ಮಾಡತಕ್ಕದ್ದು.
9. ಡೀಸೆಲ್ ದರ ಹೆಚ್ಚು/ಕಡಿಮೆಯಾದಲ್ಲಿ ವಾಹನದ ದಿನ ಬಾಡಿಗೆ ದರ ಪರಿಷ್ಕರಿಸಲಾಗುವುದಿಲ್ಲ.
10. ವಾಹನವನ್ನು ಕಾಲು ಬಾಯಿ ರೋಗ ನಿಯಂತ್ರಣದ ಲಸಿಕೆ ಹಾಕಲು ಮಾತ್ರ ಬಳಸತಕ್ಕದ್ದು, ಹಾಗೂ ವಾಹನವು ದುರುಪಯೋಗವಾಗದಂತೆ ನೋಡಿಕೊಳ್ಳುವುದು.
11. ನಿಗದಿತ ಸಮಯಕ್ಕೆ ಸರಿಯಾಗಿ ವಾಹನವನ್ನು ನೀಡದಿದ್ದಲ್ಲಿ ಅಥವಾ ಅವಧಿ ಮಧ್ಯ ನಿಲ್ಲಿಸಿದಲ್ಲಿ ಗುತ್ತಿಗೆದಾರರು ಕಟ್ಟಿರುವ ಇ.ಎಂ.ಡಿ./ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಟೆಂಡರ್‌ನ್ನು ರದ್ದು ಪಡಿಸುವ ಅಧಿಕಾರವನ್ನು ನಿರ್ವಾಹಕ ನಿರ್ದೇಶಕರು ಹೊಂದಿರುತ್ತಾರೆ.
12. ವಾಹನದಲ್ಲಿ ಕಾಲು ಬಾಯಿ ಜ್ವರ ಲಸಿಕೆ/ಔಷಧಿಗಳು ಹಾಳಾಗದಂತೆ ಎಚ್ಚರಿಕೆ ವಹಿಸುವುದು. ಲಸಿಕೆ/ಔಷಧಿಗಳು ಹಾಳಾದಲ್ಲಿ ಗುತ್ತಿಗೆದಾರರ ಇ.ಎಂ.ಡಿ/ಸಾಗಾಣಿಕೆ ಬಿಲ್ಲಿನಲ್ಲಿ ಕಟಾಯಿಸಲಾಗುವುದು.
13. ಗುತ್ತಿಗೆ ಪಡೆದು ವಾಹನ ಒದಗಿಸದಿದ್ದಲ್ಲಿ ಕಟ್ಟಿರುವ ಇ.ಎಂ.ಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
14. ವಾಹನಗಳನ್ನು ಕಾಲು ಬಾಯಿ ರೋಗ ನಿಯಂತ್ರಣ ಲಸಿಕಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಗ್ರಾಮಾಂತರ ಸ್ಥಳಗಳಲ್ಲಿ ಬಳಸಲಾಗುವುದರಿಂದ ಸಮಯಕ್ಕೆ ಆದ್ಯತೆ ನೀಡಿ ಸಹಕರಿಸುವವರು ಮಾತ್ರ ಟೆಂಡರ್ ಸಲ್ಲಿಸಬಹುದು.
15. **ವಾಹನದ ಆರ್.ಸಿ. ಪುಸ್ತಕ/ಲಾಗ್ ಪುಸ್ತಕ/ ಮತ್ತು ಪಾನ್ ಕಾರ್ಡ್‌ನ ಜೆರಾಕ್ಸ್ ಪ್ರತಿಯೊಂದಿಗೆ ದ್ವಿಪ್ರತಿಯಲ್ಲಿ ಬಿಲ್ಲನ್ನು ವ್ಯವಸ್ಥಾಪಕ ನಿರ್ದೇಶಕರು ಶಿವಮೊಗ್ಗ ಹಾಲು ಒಕ್ಕೂಟ ಇವರ ಹೆಸರಿಗೆ ಸಲ್ಲಿಸುವುದು.**
16. ದರ ಒಪ್ಪಿಗೆಯಾದ ಗುತ್ತಿಗೆದಾರರಿಗೆ ವಾಹನಗಳನ್ನು ಒದಗಿಸಲು ದೂರವಾಣಿ/ಪತ್ರ ಮುಖೇನ ತಿಳಿಸಲಾಗುವುದು.
17. ದಿನಾಂಕ 01.08.2015 ರಿಂದ 15.08.2015 ರವರೆಗೆ ಗರಿಷ್ಠ 15 ದಿನಗಳ ನಿಗದಿಪಡಿಸಿದ್ದು, ಅನಿವಾರ್ಯವಾದಲ್ಲಿ ಅದನ್ನು ಬದಲಾಯಿಸುವ ಹಕ್ಕನ್ನು **ವ್ಯವಸ್ಥಾಪಕ ನಿರ್ದೇಶಕರು, ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟ, ಇವರು ಹೊಂದಿದ್ದು, ಈ ರೀತಿ ಬದಲಾವಣೆಗೆ ಯಾವುದೇ ಪರಿಹಾರವನ್ನು ನೀಡಲಾಗುವುದಿಲ್ಲ.**

18. ಮೇಲ್ಕಂಡ ಷರತ್ತು/ನಿಬಂಧನೆಗಳನ್ನು ಉಲ್ಲಂಘಿಸಿದಲ್ಲಿ, ಅವಧಿಗೆ ಮುನ್ನವೇ ವಾಹನ ಒದಗಿಸುವುದನ್ನು ನಿಲ್ಲಿಸಿದಲ್ಲಿ ಗುತ್ತಿಗೆದಾರರ ಬಿಲ್ಲನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರವನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ.

19. ಪ್ರತಿ ಒಂದು ವಾಹನಕ್ಕೆ ಪ್ರತ್ಯೇಕ ಟೆಂಡರ್ ಅರ್ಜಿ ಸಲ್ಲಿಸುವುದು. ಹಾಗೂ ಪ್ರತಿ ವಾಹನಕ್ಕೆ ರೂ. 2000/- ದಂತೆ ಇ.ಎಂ.ಡಿ. ನಿಗದಿಪಡಿಸಿದ್ದು, ನಗದು/ಡಿ.ಡಿ.ಮೂಲಕ ಇ.ಎಂ.ಡಿ. ಪಾವತಿಸಬಹುದಾಗಿದೆ. **ಡಿ.ಡಿ.ಯನ್ನು ನಿರ್ವಾಹಕ ನಿರ್ದೇಶಕರು, ಶಿವಮೊಗ್ಗ ಹಾಲು ಒಕ್ಕೂಟ, ಶಿವಮೊಗ್ಗ ಇಲ್ಲಿ ಸಂದಾಯವಾಗುವಂತೆ ನೀಡುವುದು. (Managing Director, Shimoga Milk union, Shimoga, Payable@Shimoga.)**

**ಯಾವುದೇ ಕಾರಣ ನೀಡದೆ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ದಿನಾಂಕ : 15.07.2015**

**ಸಹಿ/-**

**ವ್ಯವಸ್ಥಾಪಕ ನಿರ್ದೇಶಕರು**
**ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ**
**ಜಿಲ್ಲಾ ಸಹಕಾರ ಹಾಲು ಒಕ್ಕೂಟ**